ದಿನಾಂಕ 08-06-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀಮತಿ ಹೆಚ್.ಎಂ.ಎಸ್., ವಕೀಲರಿಂದಃ-

ನಾನು 8ನೇ ತರಗತಿಯವರೆಗೆ ಕಲಿತಿದ್ದೇನೆ. ನನಗೆ ಕನ್ನಡ ಮಾತ್ರ ಓದಲು, ಬರೆಯಲು ಬರುತ್ತದೆ. ವಾದಿ ನನಗೆ ಮೊದಲಿನಿಂದಲೂ ಪರಿಚಯ. ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. ಪ್ರತಿವಾದಿಗಳು ನನಗೆ ಯಾರೂ ಗೊತ್ತಿಲ್ಲ, ಅಗ್ರಿಮೆಂಟ್ ಆದ ದಿನ ಮಾತ್ರ ಗೊತ್ತು. ವಾದಿಯ ಮಗ ಪ್ರಕಾಶ್‌ರವರ ಅಧೀನದಲ್ಲಿ ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ವಾದಿ ಮತ್ತು ಪ್ರತಿವಾದಿಗಳು ಜಮೀನಿನ ಮಾತುಕತೆ ಮಾಡಿದ್ದು ಯಾವಾಗ ಎಂದರೆ ಸಾಕ್ಷಿಯು ಅಗ್ರಿಮೆಂಟ್ ಆದದ್ದು ದಿನಾಂಕ 31.10.2015 ರಲ್ಲಿ ಎಂದು ನುಡಿಯುತ್ತಾರೆ. ಅಗ್ರಿಮೆಂಟ್‌ಗೂ ಮುಂಚೆ ಆದ ಮಾತುಕತೆಯ ಬಗ್ಗೆ ನನಗೆ ಗೊತ್ತಿಲ್ಲ. ಅಗ್ರಿಮೆಂಟ್‌ನಲ್ಲಿ ಹೇಳಿರುವ ಚೆಕ್ ವಾದಿಯ ಚೆಕ್ ಎಂದರೆ ಸಾಕ್ಷಿಯು ಪ್ರಕಾಶ್‌ರವರದ್ದು ಎಂದು ನುಡಿಯುತ್ತಾರೆ. ಸದರಿ ಚೆಕ್ ವಾದಿಯ ಚೆಕ್ ಆಗಿದ್ದರೂ ಸಹ ಅದು ಪ್ರಕಾಶ್‌ರವರ ಚೆಕ್ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 31.10.2015 ರಂದು ನಾನು ಪ್ರಕಾಶ್‌ರವರ ಜೊತೆ ಸಬ್-ರಿಜಿಸ್ಟ್ರಾರ್ ಕಛೇರಿಗೆ ಹೋದೆ. ನನ್ನನ್ನು ಡಿಪೋದಿಂದ ಕರೆದುಕೊಂಡು ಹೋದರು. ಅಗ್ರಿಮೆಂಟ್ ನೋಂದಣಿಯಾದ ಸಮಯ ನನಗೆ ಗೊತ್ತಿಲ್ಲ.

2. ವಾದಿಯ ಮಗ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದು ನಾನು ಅವರ ವಿರುದ್ಧ ಯಾವುದೇ ದೂರು ಕೊಟ್ಟಿಲ್ಲ. ನಿಮಗೆ ದೂರು ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನೇಕೆ ಮಾಡಲಿ ಎಂದು ನುಡಿಯುತ್ತಾರೆ. ಬೇರೆ ಯಾರೂ ಸಹ ವಾದಿಯ ಮಗ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದು ಯಾವುದೇ ಆರೋಪ ಮಾಡಿಲ್ಲ, ಯಾವುದೇ ದೂರು ಕೊಟ್ಟಿಲ್ಲ. ಪ್ರತಿವಾದಿಗಳು ವಾದಿಗೆ ಬೇರೆ ಸ್ವತ್ತನ್ನು ಸಹ ಮಾರಾಟ ಮಾಡುತ್ತೇವೆ ಎಂದು ಅಗ್ರಿಮೆಂಟ್ ಮಾಡಿಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಿಪಿ-2 ಅಗ್ರಿಮೆಂಟನ್ನು ಓದಿ ನೋಡಿದ್ದೇನೆ. ನಿಪಿ-2 ರಲ್ಲಿ ಹಣದ ವ್ಯವಹಾರ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ನಾನು ನೋಡಿಲ್ಲ, ಬಡ್ಡಿಗೋಸ್ಕರ ಚೆಕ್ ಕೊಟ್ಟಿದ್ದಾರೆ ಎಂದು

ನುಡಿಯುತ್ತಾರೆ. ನಿಪಿ-2 ನ್ನು ಜಮೀನು ಮಾರಾಟ ಮಾಡಲು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು ಸಹಿ ಮಾಡಿರುವುದು ಜಮೀನಿನ ಸಂಬಂಧ ಆದರೆ ಹಣದ ವ್ಯವಹಾರಕ್ಕೆ ಅಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಕಾಣಿಸಿರುವ ಹಣ ವಾದಿಯ ಮಗ ಪ್ರಕಾಶ್‌ರವರಿಗೆ ಸೇರಿದ್ದು ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ವಾದಿ ಪ್ರತಿವಾದಿಗಳಿಗೆ ನೀಡಿರುವ ಆರು ಲಕ್ಷ ಬಡ್ಡಿ ವ್ಯವಹಾರಕ್ಕೆ ಎಂದು ತೋರಿಸಲು ದಾಖಲೆ ನನ್ನ ಬಳಿ ಇಲ್ಲ. ಅಡಮಾನ ಪತ್ರ ಅಥವಾ ಬಡ್ಡಿ ವ್ಯವಹಾರದ ದಾಖಲೆ ಎಂದು ಬರೆದುಕೊಂಡರಾ ಎಂದರೆ ಸಾಕ್ಷಿಯು ಒಂದು ದಾಖಲೆಗೆ ಸಹಿ ಮಾಡಿ ಎಂದು ಹೇಳಿದರು, ಸಹಿ ಮಾಡಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಹಾಗೂ ನನ್ನ ಮಾವ ಪಂಚಾಕ್ಷರಯ್ಯ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ನನಗೆ ವಿಚಾರ ಗೊತ್ತಿದ್ದು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಗ ಪ್ರಕಾಶ್‌ರವರು ಕೆಲಸದಲ್ಲಿ ಬಹಳ ಕಟ್ಟುನಿಟ್ಟಾದ ಅಧಿಕಾರಿಯಾಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಏನಾದರೂ ಎದುರು ಮಾತನಾಡಿದರೆ ಕಿರುಕುಳ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಆದ್ದರಿಂದ ಅವರ ವಿರುದ್ಧ ನನಗೆ ದ್ವೇಷ ಇತ್ತು ಎಂದರೆ ಸರಿಯಲ್ಲ. ವಾದಿಯ ಮಗ ಬೇರೆ ಯಾವ ಜಮೀನುಗಳ ಸಂಬಂಧ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಹಣದ ಅವಶ್ಯಕತೆ ಹೇಗೆ ಇತ್ತು ಎಂದು ಗೊತ್ತಿಲ್ಲ. ಪ್ರಕಾಶ್‌ರವರ ವಿರುದ್ಧ ನನಗೆ ದ್ವೇಷ ಇದ್ದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.